(ii) Notification No. GSR 116 dated 1st April 1976.

The Karnataka Excise (Spirituous preparation and Manufacture, Sale and Account) (Amendment) Rules, 1976.

Under section 71(4) of the Karnataka Excise Act, 1965.

SRI N CHIKKE GOWDA (Minister for Agriculture and Animal Husbandry).— I beg to lay

Notidcation No. S.O. 984 dated 29th January, 1976.

Instruction for prevention of Animal disease at Chickmagalur Taluk.

Under section 37 of the Karnataka Animal Diseases (Control) Act, 1961.

SRI SUBASH ASTURE (Minister of State for Major and Medium Irrigation).—I beg to lay.

Notification No. GSR 71 dated 23rd February, 1976.

The Karnataka Irrigation (Levy of Water Rates (Amendment) Rules, 1976 together with Corrigendum No. PWD 97 LBW 76 dated 16th March, 1976.

Under section 11(4) of Karnataka Irrigation Betterment (Contribution and Water Rates) Act, 1957.

MADAM SPEAKER.—All the notifications etc., are laid on the Table.

2-00 P.M.

KARNATAKA VACANT LANDS IN URBAN AREAS (PROHIBITION OF ALIENATION) (AMENDMENT) BILL, 1976

Motion to Consider

SRI N. HUTCHAMASTHY GOWDA — (Minister for Revenue) I beg to move :

> "That the Karnataka Vacant Lands in Urban Areas (Prohibition of Alienation) (Amendment) Bill, 1976 be taken into consideration."

MADAM SPEAKER — Motion moved.

> "That the Karnataka Vacant Lands in Urban Areas (Prohibition of Alienation) (Amendment) Bill, 1976, be taken into consideration."

†ಶ್ರೀ ಎನ್. ಹುಚ್ಚಮಾಸ್ತಿಗೌಡ.— ಸನ್ಮಾನ್ಯ ಅಧ್ಯಕ್ಷರೇ, ಪಟ್ಟಣಗಳಲ್ಲಿರುವ ಖಾಲಿ ಜಮೀನುಗಳನ್ನು ಪರಭಾರೆ ಮಾಡುವ ವಿಚಾರದಲ್ಲಿ ಪ್ರತಿಬಂಧಕವನ್ನು ಹಾಕುವುದಕ್ಕಾಗಿ ನಾವು ಈ ಹಿಂದೆಯೇ ಕಾನೂನನ್ನು ತೆಗೆದುಕೊಂಡು ಬಂದಿದ್ದೆವು. ಇದು ಕೇಂದ್ರದಿಂದ ರಚನೆಯಾದಂಥ ಕಾನೂನು ಈಗಾಗಲೇ ಇಲ್ಲಿ ಜಾರಿಗೆ ಬಂದಿದೆ. ಹೀಗೆ ಜಾರಿಗೆ ಬಂದಿರತಕ್ಕ ಸ್ಥಳಗಳಲ್ಲಿ ಹಿಂದೆ ಇದ್ದಂಥ ಕಾನೂನನ್ನು ರಿಪೀಲ್ ಮಾಡಬೇಕಾದುದು ಅವಶ್ಯ ಎಂದು ಕಂಡುಬಂದುದರಿಂದ, ಈ ಮಸೂದೆಯನ್ನು ಸಭೆಯ ಮುಂದೆ ತಂದಿದ್ದೇವೆ. ಈ ಕಾನೂನು, ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ, ಮತ್ತು ಹುಬ್ಬಳ್ಳಿ-ಧಾರವಾಡ ಈ ಐದು ಪ್ರದೇಶಗಳಿಗೆ ಮಾತ್ರ ಈಗ ಜಾರಿಗೆ ಬಂದಿದೆ. ಇನ್ನುಳಿದ ಆರು ಪ್ರದೇಶಗಳಿಗೆ ಈ ಕಾನೂನು ಅನ್ವಯಿಸುವುದಿಲ್ಲ. ಆದುದರಿಂದ, ಈ ಆರು ಸ್ಥಳಗಳನ್ನು ಬಿಟ್ಟು, ಉಳಿದ ಸ್ಥಳಗಳಲ್ಲಿರುವ ಈ ಕಾನೂನನ್ನು ರಿಪೀಲ್ ಮಾಡಬೇಕಾಗಿದೆ. ಇದು ಒಂದು ಸಣ್ಣ ಮಸೂದೆ, ಮಾನ್ಯ ಸಭೆಯು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಟಿ.ಆರ್. ಶಾಮಣ್ಣ (ಕೋಚೆ).— ಸನ್ಮಾನ್ಯ ಸಭಾಧ್ಯಕ್ಷೀಣಿಯವರೇ, ಈ ದಿನ ನಮ್ಮ ಮುಂದೆ ಇರುವ 1976ನೇ ಇಸವಿಯ ಕರ್ನಾಟಕ ರಾಜ್ಯದ ನಗರ ಪ್ರದೇಶದಲ್ಲಿನ ಖಾಲಿ ಜಮೀನನ್ನು ಪರಬಾರೆ ಮಾಡುವುದನ್ನು ನಿಷೇಧಿಸುವುದಕ್ಕೆ ಸಂಬಂಧಿಸಿದ (ತಿದ್ದುಪಡಿ) ಮಸೂದೆ ಸ್ವಲ್ಪ ಸಣ್ಣದಾದರೂ, ಪ್ರಾಮುಖ್ಯವಾದುದು ಎಂದು ನನಗನಿಸುತ್ತದೆ. ಕರ್ನಾಟಕದ ಕೆಲವು ನಗರಗಳ ಸುತ್ತಮುತ್ತ ಮತ್ತು ಅಕ್ಕಪಕ್ಕಗಳಲ್ಲಿರುವ ಜಾಗಗಳನ್ನು ಪರಭಾರೆ ಮಾಡುವುದಕ್ಕೆ ಪ್ರತಿಬಂಧಕವನ್ನು ಹಾಕುವ ಒಂದು ಸುಗ್ರೀವಾಜ್ಞೆಯು 1975ನೇ ಮೇ ಒಂದರಿಂದ ಜಾರಿಯಲ್ಲಿತ್ತು ಅನಂತರ, ಅದನ್ನು ಮಸೂದೆಯನ್ನಾಗಿ ಮಾರ್ಪಡಿಸಿದರು. ಆದರೆ, ನನಗೆ ವ್ಯಸನವನ್ನುಂಟು ಮಾಡುವ ವಿಚಾರವೇನೆಂದರೆ —ಈ ನಿಯಮ 1975ನೇ ಮೇ ತಾಹೆ ಒಂದನೆ ತಾರೀಖಿನಿಂದಲೇ ಜಾರಿಗೆ ಬಂದಿದ್ದರೂ ಕೂಡ, ಬೆಂಗಳೂರು ನಗರದಲ್ಲಿ ಸುಮಾರು ಎರಡು ಸಾವಿರ ಎಕರೆ ಗಳಿಗಿಂತಲೂ ಹೆಚ್ಚಾದ ಜಮೀನು ಪರಭಾರೆಯಾಗಿದೆ ಎಂದು ಹೇಳಿದರೆ, ಅದು ತಪ್ಪಾಗಲಾರದೂ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ತಂದಿರುವ ಮಸೂದೆ ಮತ್ತು ಇದಕ್ಕೆ ಸಂಬಂಧಿಸಿದ ವ್ಯಾಪ್ತಿಯನ್ನು ಮೊದಲೇ ಸರ್ಕಾರದವರು ತಂದಿದ್ದ ಪಕ್ಷದಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತಿತ್ತು ಎಂದು ನನಗನಿಸುತ್ತದೆ. ಈಗ, ಊರಲ್ಲಾ ನೂರೆಯಾವ ಮೇಲೆ ಊರಿನ ಬಾಗಿಲನ್ನು ಹಾಕಿದರು ಎನ್ನುವಂತಾಗಿದೆ. ಸಾವಿರಾರು ಎಕರೆಗಳನ್ನು ಪರಭಾರೆಮಾಡಿ ಅನೇಕ ಜನರು ಇದರಿಂದ ಹೆಚ್ಚಿನ ಲಾಭ ಪಡೆದ ಮೇಲೆ. ಇದನ್ನು ನಿಷೇಧಿಸುವ ಕರಿತು ಈಗ ಕಾಯಿದೆ ತರುತ್ತಿರುವುದು ಬಹಳ ಶೋಚನೀಯವಾದ ವಿಚಾರವೆಂದು ನಾನು ಹೇಳುತ್ತೇನೆ. ನಗರ ಆಸ್ತಿ ಮಿತಿ ಕಾನೂನು ಜಾರಿಗೆ ಬಂದ ಮೇಲೆ, ಸಾಮಾನ್ಯವಾಗಿ ಜಮೀನುಗಳನ್ನು ಮಾರ್, ಅದರಿಂದ ಲಾಭ ಪಡೆಯುವ ಒಂದು ವ್ಯವಹಾರ ಹೆಚ್ಚು ಕಡಿಮೆ ನಿಂತು ಹೋಗಿದೆ. ನಗರಾಭಿವೃದ್ಧಿ ಮಂಡಲಿಯವರು ಕೆಲವು ಕಾರ್ನರ್ ನಿವೇಶನಗಳನ್ನು ಹಿಂದೆ ಚದುರ-ಗಜವೊಂದಕ್ಕೆ 150-200 ರೂಪಾಯಿಗಳವರೆಗೆ ಹರಾಜು ಹಾಕುತ್ತಿದ್ದರು. ಆದರೆ, ಈಗ 75-80 ರೂಪಾಯಿಗಳಿಗೆ ತೆಗೆದು ಕೊಳ್ಳುವುದಕ್ಕೆ ಜನ ಹಿಂದೆ ಮುಂದೆ ನೋಡುತ್ತಿದ್ದಾರೆ. ಆದುದರಿಂದ, ಈ ಕಾಯಿದೆ ಒಂದು ವರ್ಷ ಮುಂಚೆಯೇ ಜಾರಿಗೆ ಬಂದಿದ್ದರೆ, ಜಮೀನುಗಳ ಬೆಲೆ ಹೆಚ್ಚಾಗಿ, ಮತ್ತು ಮನೆಗಳನ್ನು ಕಟ್ಟಿ ಅವುಗಳನ್ನು ದುಬಾರಿ ಬೆಲೆಗೆ ಬಾಡಿಗೆ ಕೊಡುವ ಪರಿಸ್ಥಿತಿ ಇರುತ್ತಿರಲಿಲ್ಲವೆಂದು ಹೇಳಬಯಸುತ್ತೇನೆ. ಆದುದರಿಂದ, ಈ ಕಾಯಿದೆಯನ್ನು ಮೊದಲೇ ಜಾರಿಗೆ ತರಬೇಕಾಗಿತ್ತು ಎಂದು ಹೇಳುತ್ತೇನೆ ಆದರೂ ಕೂಡ, ಈ ಕಾಯಿದೆ ಜಾರಿಗೆ ಬಂದಮೇಲೆ, ಕೆಲವು ಅನಾಮಧೇಯ ಸಂಘಗಳು ಹುಟ್ಟಿಕೊಂಡು, ಅವುಗಳ ಮೂಲಕ ಅನೇಕ ವ್ಯವಹಾರಗಳನ್ನು ನಡೆಸಿ, ಸುಮಾರು ಎರಡು ಸಾವಿರ ಎಕರೆ ಜಮೀನನ್ನು ಬೇರೆಯವರಿಗೆ ಮಾರಿ, ಕೆಲವರು ಲಾಭ ಮಾಡಿಕೊಂಡಿದ್ದಾರೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಕೆಲವರು ಸರ್ಕಾರದ ಮೇಲೆ ಪ್ರಭಾವ ಬೀರಿ ಅನುಕೂಲವನ್ನು ಮಾಡಿಕೆ ಂಡಿದ್ದಾರೆ ಆದುದರಿಂದ. ಇನ್ನುಮೇಲಾದರೂ, ಸರ್ಕಾರ ಎಚ್ಚೆತ್ತು, ಪರಭಾರೆ ಮಾಡುವುದಕ್ಕೆ ಅನುಮತಿಯನ್ನು ಕೊಡುವಸಂದರ್ಭದಲ್ಲಿ, ಕೊಡುವ ಸಂಘದಲ್ಲಿ ಯಾರು ಯಾರು ಸೇರಿದ್ದಾರೆ. ಪರಭಾರೆ ಮಾಡುವುದರ ಉದ್ದೇಶವೇನು, ಈ ಸಂಘ ಲಾಭ ಮಾಡುವ ಉದ್ದೇಶದಿಂದ ಹೀಗೆ ಮಾಡುತ್ತಿದ್ದೆಯೇ, ಮತ್ತು ಪರಭಾರೆಗೆ ಅನುಮತಿ ನೀಡುವಾಗ, ಅದರಿಂದ

ಕಾರ್ಮಿಕರಿಗೆ ಮತ್ತು ಇನ್ನಿತರ ವರ್ಗದವರಿಗೆ ಅನುಕೂಲವಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಿ, ಅನಂತರ ಪರಭಾರೆ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿದೆ. ಕೆಲವು ಬುದ್ಧಿವಂತರಾದ ನಾಲ್ಕೈದು ಜನ ಸೇರಿಕೊಂಡು, ಒಂದು ಸಂಘವೆಂದು ಮಾಡಿಕೊಂಡು, ಸ್ವಲ್ಪ ಜಮೀನನ್ನು ಒಟ್ಟಿಗೆ ಕೊಂಡುಕೊಂಡು, ಅದನ್ನು ಬೇರೆ ಸಂಘಕ್ಕೆ ಹೆಚ್ಚು ಲಾಭಕ್ಕೆ ಮಾರುವ ಪರಿಸ್ಥಿತಿ ಇದೆ. ಅನೇಕ ಸಂದರ್ಭದಲ್ಲಿ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಒಂದು ಎಕರೆ ಜಮೀನನ್ನು ನಾಲ್ಕು ಸಾವಿರ ರೂಪಾಯಿಗಿಂತ ಕಡಿಮೆ ತೆಗೆದುಕೊಂಡು ಚದರಗಜಕ್ಕೆ 25 ರೂಪಾಯಿನಂತೆ ಮಾರಿ; ಹೆಚ್ಚಿನ ಲಾಭ ಮಾಡಿಕೊಂಡಿರುವಂತ ಅನೇಕ ನಿದರ್ಶನಗಳು ಇವೆ. ಇದರಿಂದ ಹೆಚ್ಚು ಜನ ಲಾಭ ಮಾಡಿಕೊಂಡಿದ್ದಾರೆ; ಇದಕ್ಕೆ ಅವಕಾಶ ಮಾಡಿಕೊಡಕೂಡದೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಬೆಂಗಳೂರು ನಗರವಲ್ಲಿ ನನ್ನ ಅಂದಾಜು ಪ್ರಕಾರ ಒಂದು ಲಕ್ಷಕ್ಕಿಂತ ಹೆಚ್ಚು ರೆವಿನ್ಯೂ ಸೈಟುಗಳನ್ನು ಟ್ರಸ್ಟ್‌ಬೋರ್ಡಿನವರು ಕೊಂಡು ಲಕ್ಷಾಂತರ ರೂಪಾಯಿಗಳನ್ನು ಗಳಿಸಿದ್ದಾರೆ. ನೂರು ಬೇಕಾದರೂ ಇಂಥ ನಿದರ್ಶನಗಳನ್ನು ಕೊಡುತ್ತೇನೆ. ಈ ಕಾಯಿದೆ ಮೊದಲೆ ತಂದಿದ್ದರೆ ಸರ್ಕಾರಕ್ಕೂ ಮತ್ತು ಸಾರ್ವಜನಿಕರಿಗೂ ಹೆಚ್ಚಿನ ಪ್ರಯೋಜನವಾಗುತ್ತಿತ್ತು. ಮೊದಲು ಏಕೆ ತರಲಿಲ್ಲ ಎನ್ನುವುದೇ ಶೋಚನೀಯವಾದ ವಿಚಾರ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಕೇಂದ್ರದಲ್ಲಿ ಪ್ರೊಹಿಬಿಷನ್ ಎಲನೇಷನ್ ಆಕ್ಟ್ ಪಾರ್ಲಮೆಂಟಿನಲ್ಲಿ ಪಾಸಾಗಿ ಜಾರಿಗೆ ಬಂದಮೇಲೆಯೇ?

ಶ್ರೀ ಟಿ.ಆರ್ ಶಾಮಣ್ಣ.— ಕೇಂದ್ರಸರ್ಕಾರದಿಂದ ರ್ಯಾಂಡ್ ಸೀಲಿಂಗ್ ಆಕ್ಟ್ ಬಂದ ಮೇಲೆ ಯಾವ ವ್ಯವಹಾರವೂ ನಡೆಯುತ್ತಿಲ್ಲ. 100 ರೂಪಾಯಿ ಚದರ ಗಜ ಇದ್ದುದ್ದು; 50 ರೂಪಾಯಿ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆರ್ಡಿನೆನ್ಸ್ ಹೊರಡಿಸುವುದಕ್ಕೆ ಮೊದಲೇ ಇದ್ದುದನ್ನು ನಾನು ಹೇಳುತ್ತಿದ್ದೇನೆ. ಆದರೂ ಕೇಂದ್ರ ಸರ್ಕಾರದ ಅರ್ಬನ್ ರ್ಯಾಂಡ್ ಸೀಲಿಂಗ್ ಆಕ್ ಬಂದಮೇಲೆ ಕೆಲವು ತೊಡಕುಗಳು ಇವೆ, ಇಧರ ಬಗ್ಗೆಯೂ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಮೊದಲನೆಯದಾಗಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಹಾಗೂ ಹೊಸದಾಗಿ ಸ್ಥಾಪಿತವಾಗಿರುವ ಟ್ರಸ್ಟ್‌ಬೋರ್ಡ್‌ಗಳು ಹಾಗೂ ಮ್ಯುನಸಿಪಲ್ ಟ್ರಸ್ಟ್‌ಬೋರ್ಡಿನ ಅಧಿಕಾರ ಮೊಟಕು ಆಗಿದೆ, ರ್ಯಾಂಡ್ ಅಕ್ವೈರ್ ಬಗ್ಗೆ ಹಾಗೂ ಡಿಸ್‌ಪೊಸಲ್ ಬಗ್ಗೆ ಟ್ರಸ್ಟ್‌ಬೋರ್ಡುಗಳಿಗೆ ತೊಡಕು ಇವೆ, ಈ ತೊಡಕುಗಳನ್ನು ಬಗೆಹರಿಸಿದರೆ ಕೆಲಸ ಸುಲಭವಾಗುತ್ತದೆ. ಮೊದಲು ರ್ಯಾಂಡ್ ಅಕ್ವಿಜಿಷನ್ ಪವರ್ ಟ್ರಸ್ಟ್‌ಬೋರ್ಡುಗಳಿಗೆ ಇತ್ತು, ಈಗ ಅರ್ಬನ್ ರ್ಯಾಂಡ್ ಸೀಲಿಂಗ್ ಆಕ್ಟ್ ಬಂದಮೇಲೆ ಈ ಅಧಿಕಾರ ಇಲ್ಲ, ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಮಾರ್ಪಾಡು ಮಾಡುವ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಇಂಡಿಸ್ಟ್ರಿಯಲ್ ರ್ಯಾಂಡ್, ಕೈಗಾರಿಕೆಗಳಿಗೆ ಸ್ವಲ್ಪ ದೊಡ್ಡ ನಿವೇಶನಗಳನ್ನು ಕೊಡಬೇಕಾದ ಪ್ರಸಂಗ ಬರುತ್ತದೆ. ಸರ್ಕಾರಕ್ಕೆ ವಿನಾಯಿತಿ ಕೊಡತಕ್ಕಂಥ ಅವಕಾಶ ಇರಬಹುದು, ಇಂಡಿಸ್ಟ್ರೀಸ್ ಡವಲಪ್‌ಮೆಂಟ್‌ನ್ನು ಬೆಂಗಳೂರು ಬಿಟ್ಟು ಹೊರಗಡೆ ರ್ಯಾಂಡ್ ಅಕ್ವೈರ್‌ಗೆ ತೊಂದರೆ ಬರಬಹುದು, ಇಂಡಿಸ್ಟ್ರೀಸ್ ಡೆವಲಪ್‌ಮೆಂಟ್‌ಗೆ ತೊಡಕು ಬರದಹಾಗೆ, ಹೆಚ್ಚಿನ ಲಾಭವಾಡಿಕೊಳ್ಳದ ಹಾಗೆ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ, ಅರ್ಬನ್ ರ್ಯಾಂಡ್ ಸೀಲಿಂಗ್ ಆಕ್ಟ್ ತಂದಿದ್ದೀರಿ, ಆದರೆ ಹಾರಿಸಾಂಟರ್ ಮತ್ತು ವರ್ಟಿಕಲ್ ಗ್ರೋತ್‌ನ್ನು ಹತ್ತು ಮಹಡಿ, ಆರು ಮಹಡಿ ಕಟ್ಟಿಸಿದರೂ ಅರ್ಬನ್‌ರ್ಯಾಂಡ್ ಸೀಲಿಂಗ್ ಆಕ್ಟ್‌ನಿಂದ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಲಾಭ ಪಡೆಯುವುದಕ್ಕೂ ಅವಕಾಶ ಇದೆ. ಜಮೀನಿನ ಬಗ್ಗೆಯೂ ಅನುಕೂಲವಾಗುತ್ತದೆ, ಹಾರಿಸಾಂಟಲ್ ಡೆವಲಪ್‌ಮೆಂಟ್‌ಗೆ ಮತ್ತು ವರ್ಟಿಕಲ್ ಡೆವಲಪ್‌ಮೆಂಟ್‌ಗೆ ತಡೆ ಆಗುತ್ತದೆ ಇದರ ಬಗ್ಗೆ ಯೋಚನೆ ಮಾಡಬೇಕು. 45′ × 60–100 ಮನೆ ಕಟ್ಟಿಸಿದರೂ ಒಂದೇ ಮನೆ ಕಟ್ಟಿಸಿದರೂ ಅಷ್ಟೇ ಟ್ಯಾಕ್ಸ್ ಕೊಡಬೇಕು, ಇದರಿಂದ ಸರ್ಕಾರಕ್ಕೆ ಹೆಚ್ಚು ಕಷ್ಟವಾಗುತ್ತದೆ. ಕೆಲವು ಸಂದರ್ಭದಲ್ಲಿ 4–5 ಮಕ್ಕಳು ಇರತಕ್ಕ ಫ್ಯಾಮಿಲಿ ಜಮೀನಿನ ಕೇನಸ್‌ನಲ್ಲಿ ಹಾಗೂ ಸಾವಿರ ಎಕರೆ ಇರತಕ್ಕ ಜಿನಿಯನ್ ಕೇನಸ್‌ನಲ್ಲಿ ಕೆಲವು ತೊಡಕುಗಳು ಇರುತ್ತವೆ ಅಲ್ಲದೆ ಫ್ಯಾಮಿಲಿ ಪಾರ್ಟಿಷನ್‌ಗೂ ಅನುಕೂಲ ಮಾಡಿಕೊಡಬಹುದು, ಆದುದರಿಂದ ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ, ಲಾಭದ ದೃಷ್ಟಿಯಿಂದ ಮಾಡುವವರಿಗೆ ಏನು ಬೇಕಾದರೂ ಮಾಡಿ. ಇದರಲ್ಲಿ ಭೂಮಿಗಳನ್ನು ಅಲನೇಷನ್,

ಮಾಡುವಾಗ ಮತ್ತು ಅವನ್ನು ಲಾಭಪಡೆಯುವ ಸಂದರ್ಭದಲ್ಲಿ ಸರ್ಕಾರ ಬದಿತವಾದ ನಿಯಮಾವಳಿಗಳನ್ನು ಮಾಡಿ, ಯಾವುದೇ ಪ್ರಭಾವಕ್ಕೂ ಒಳಗಾಗದಹಾಗೆ ಮಾಡಬೇಕು. ಕ್ರಮಬದ್ಧವಾದ ನಿಯಮಾವಳಿಗಳನ್ನು ಮಾಡದೇ ಹೋದರೆ, ಪ್ರಭಾವವುಳ್ಳತಕ್ಕಂಥವರು ದುರುಪಯೋಗಪಡಿಸಿಕೊಳ್ಳತಕ್ಕಂಥ ಸಂದರ್ಭವೂ ಉಂಟು. ಅಲ್ಲದೆ ಬೆಂಗಳೂರು ನಗರ ಮುತ್ತ ಮುತ್ತಲೂ ಮಿಲಿಟರಿ ಏರಿಯಾ ಇದೆ. ಇದರಲ್ಲಿ ಹೆಚ್ಚು ಭಾಗವನ್ನು ಉಪಯೋಗಿಸುತ್ತಾ ಇಲ್ಲ, ಕೇಂದ್ರಸರ್ಕಾರದ ಜೊತೆ ವ್ಯವಹಾರ ಮಾಡಿ, ಮಿಲಿಟರಿ ನೆರೆಯನ್ನು ಊರ ಹೊರಗಡೆ ಕಳುಹಿಸುವುದಕ್ಕೆ ಅವಕಾಶ ಇದೆ. ಇದರ ಬಗೆಯೂ ಕ್ವಲ್ಪ ಯೋಚನೆ ಮಾಡಬೇಕಾಗುತ್ತದೆ, ಅಲ್ಲದೆ ಇದರಿಂದ ಹೆಚ್ಚಿನ ಪ್ರಯೋಜನ ಆಗುತ್ತದೆ, ಜನ ವಾಸವಾಡಕ್ಕೆ ಜಾಗಗಳಲ್ಲಿ ಅದನ್ನು ತಗೆದುಕೊಳ್ಳುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ; ನನಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಇಲ್ಲ ಇದರೂ ಕೂಡ ಒಂದು ವಿಚಾರವನ್ನು ತಮ್ಮಗಮನಕ್ಕೆ ತರುತ್ತೇನೆ. ಈಗ ಸೀಲಿಂಗ್ ಆಕ್ಟ್ ಪ್ರಕಾರ ಪರಭಾರೆ ಮಾಡುವುದಕ್ಕೆ ಆಗುವುದಿಲ್ಲ ಸರ್ಕಾರ ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಬೇಕು. ಇದು ಆ ಮೇಲೆ ಸ್ವಲ್ಪ ಕಷ್ಟಪಡಬೇಕಾಗುತ್ತದೆ, ಬೆಂಗಳೂರು ನಗರವನ್ನು ಮತ್ತು ಮುಂಗಳೂರು ನಗರದಲ್ಲಿ ಅನೇಕ ಜಾಗಗಳು ಇವೆ. ಅರ್ಬನ್ ಸೀಲಿಂಗ್‌ಗೆ ಒಳಪಡತಕ್ಕಂಥ ಜಾಗಗಳು ಬೆಂಗಳೂರಿನಲ್ಲಿ ಏನಾಗಿದೆ ಅಂದರೆ ಜನಸಂಖ್ಯೆ ಬೆಳೆದಂತೆ ಮನೆಗಳ ಸಂಖ್ಯೆಯು ಬೆಳೆಯುತ್ತಿದೆ. ಬೆಂಗಳೂರು ನಗರ ಸುಂದರವಾದ ವಾಯುಗುಣ ಪಡೆಯತಕ್ಕಂಥ. ಕಾಲು ಬಂದಿದೆ. ಮುಖ್ಯವಾದ ಪಾರ್ಕ್ಸ್, ಮತ್ತು ಪ್ಲೇಗ್ರೌಂಡ್ಸ್‌ಗೆ ಅವಕಾಶ ಮಾಡಿಕೊಡತಕ್ಕಂಥ. ಇರತಕ್ಕ ಜಾಗಗಳಲ್ಲಿ ಬೇಕಾಬಿಟ್ಟಿ ದುರ್ವ್ಯವಹಾರ ನಡೆದಿದೆ, ಜಮೀನುಗಳು ಹೋಗಿವೆ. ಸಾಧ್ಯವಾದಷ್ಟು ಪಾರ್ಕ್ ಮತ್ತು ಪ್ಲೇಗ್ರೌಂಡ್ಸ್‌ಗೆ ಅವಕಾಶ ಮಾಡಿಕೊಡಬೇಕು. ಒಳ್ಳೆಯ ಸೌಲಭ್ಯಕ್ಕೆ ಕಷ್ಟವಾಗದಂತೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅದರ ಜೊತೆಗೆ ಇನ್ನೊಂದು ವಿಚಾರ ಹೇಳಬೇಕು ಎಂದರೆ ಈಗ ಬೆಂಗಳೂರು ನಗರದಲ್ಲಿ ಅನೇಕ ಶಾಲೆಗಳನ್ನು ಸಣ್ಣಸಣ್ಣ ಕಟ್ಟಡಗಳಲ್ಲಿ ಮಾಡುತ್ತಿದ್ದಾರೆ. ಶಾಲೆಗಳನ್ನು ನಡೆಸುವುದಕ್ಕೆ ಸರಿಯಾದ ಕಟ್ಟಡಗಳು ಇಲ್ಲ. ಕಾರ್ಪೊರೇಷನ್‌ಗಳನ್ನು ನಡೆಸುವುದಕ್ಕೂ ಸರಿಯಾದ ಸ್ಥಳ ಇಲ್ಲದೇ ಸಣ್ಣಸಣ್ಣ ಕಟ್ಟಡಗಳಲ್ಲೇ ನಡೆಸಿಕೊಂಡು ಹೋಗುತ್ತಿದ್ದಾರೆ. ಇವೊತ್ತು ತಾವು ಈ ಶಾಲೆಗಳನ್ನು ಕಟ್ಟುವುದಕ್ಕೆ, ಆಟದ ಮೈದಾನಗಳಿಗೆ, ಜಾಗ ಮಾಡಿಕೊಡದೇ ಹೋದರೆ ಮಕ್ಕಳಿಗೆ ಬೇಕಾದಂತೆ ವಾತಾವರಣ ಸಿಕ್ಕದೇ ಕಷ್ಟವಾಗುತ್ತದೆ. ತಾವು ಮುಂದೆ ರೂಲ್ಸ್ ಮಾಡುವ ಸಂದರ್ಭ ಬರಬಹುದು, ಹಂಚಿಕೆ ಮಾಡತಕ್ಕ ಸಂದರ್ಭದಲ್ಲಿ ಎಜುಕೇಷನ್‌ಗೆ ಅನುಕೂಲವಾಗುವಂತೆ ಶಾಲಾ ಕಟ್ಟಡಗಳನ್ನು ಕಟ್ಟಲು ಅನುಕೂಲವಾಗುವಂತೆ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಮುಖ್ಯವಾಗಿ ಇನ್ನೊಂದು ವಿಚಾರ ಹೇಳಬೇಕು ಎಂದರೆ ಇವೊತ್ತಿನ ದಿವಸ ನಗರದ ಮೂಲೆ ಮೂಲೆಗಳಲ್ಲಿ ಒಂದೊಂದು ಸರ್ಕಾರದ ಕಚೇರಿಗಳು ಇವೆ, ಅಲ್ಲಿಯೇ ಅವುಗಳಿಗೆ ಸಾವಿರಾರು ರೂಪಾಯಿ ಬಾಡಿಗೆ ಕೊಡುತ್ತಿದ್ದಾರೆ, ಇದರಿಂದ ಒಟ್ಟು ಬಾಡಿಗೆ ಕೊಡತಕ್ಕ ಹಣ ಒಂದು ಕೋಟಿ ರೂಪಾಯಿ ಮೇಲೆ ಆಗುತ್ತದೆ ಎಂದು ಅನಿಸುತ್ತದೆ. ಇವೊತ್ತು ಸರ್ಕಾರದ ಕಚೇರಿಗಳಲ್ಲರತಕ್ಕ ಜಾಗ ನೋಡಿದರೆ ಅದು ಒಂದು ಗುಹೆ ಇದ್ದಂತೆ ಕಾಣುತ್ತದೆ. ಸಾಕಾದಷ್ಟು ಸ್ಥಳಾವಕಾಶ ಇಲ್ಲ, ಈಗ ವಿಧಾನಸೌಧದ ಕಚೇರಿಯಲ್ಲೇ ಒಬ್ಬರು ಕುಳಿತರೆ, ಟೇಬಲ್ ಪಕ್ಕದಲ್ಲಿ ಜಾಗ ಇರುವುದಿಲ್ಲ, ಆದುದರಿಂದ ಇವೊತ್ತು ಸರ್ಕಾರದ ಕಚೇರಿಗಳಿಗೆ ಸಾಕಷ್ಟು ಅವಶ್ಯಕತೆ ಇದೆ, ಆದುದರಿಂದ ಸರ್ಕಾರದ ಕಚೇರಿಗಳನ್ನು ಸಾಕಷ್ಟು ಹತ್ತಿರದಲ್ಲೇ ಕಟ್ಟಡ ಕಟ್ಟಿಸಿ ಉಪಯೋಗಿಸಬೇಕು ಎಂದು ಹೇಳುತ್ತೇನೆ. ಇನ್ನು ಕೊನೆಯದಾಗಿ ಭೂಮಿ ಹಂಚಿಕೆ ಮಾಡುವಾಗ ಬಡವರಿಗೆ ಕೊಡಬೇಕು ಎಂದು ಇದೆ ಅದರ ಬಗ್ಗೆ ಯಾರ ಭಿನ್ನಾಭಿಪ್ರಾಯವಿಲ್ಲ ಅದರೆ ಇವೊತ್ತು ನಿಜವಾಗಿ ಯಾರು ಪೀಕರ್ಸ್ ಸೆಕ್ಷನ್ ಇದ್ದಾರೆ ಅವರಿಗೆ ದೊರೆಯುವುದಿಲ್ಲ, ಇವೊತ್ತು ಟ್ರಸ್ಟ್ ಜೋರ್ಡಿನಲ್ಲಿ ಅನೇಕರು ಸೈಟುಗಳನ್ನು ತಗೆದುಕೊಂಡಿದ್ದಾರೆ, ಅವರಿಗೆ ಎಷ್ಟು ಮನೆಗಳು ಇವೆ ಗೊತ್ತಿದೆ, ಯಾರಿಗೆ ಪ್ರಭಾವ ಇರುತ್ತದೆ ಅವರಿಗೆ ಸೈಟುಗಳು ಸಿಕ್ಕುತ್ತದೆ. ಇವೊತ್ತು ನ್ಯಾಯವಾಗಿ, ನಿಜವಾಗಿ ಕಷ್ಟದಲ್ಲಿರತಕ್ಕವರಿಗೆ ಒಂದು ಸೈಟಾಗಲಿ, ಒಂದು ಮನೆಯಾಗಲಿ ಸಿಕ್ಕುವುದು ಕಷ್ಟ, ಅದುದರಿಂದ ಸರಿಯಾದ ನಿಯಮಾವಳಿ ಆಗಬೇಕು, ಈಗ ಈ ಕಾಯಿದೆ ಜಾರಿಗೆ ಬಂದಿರುವ ಸರ್ಕಾರದವರಿಗೆ ಹಿತದೃಷ್ಟಿಯಿಂದ ಅನುಕೂಲವಾಗುವಂತೆ ಮಾಡಿ ಈ ಕಾಯಿದೆ ಮೊದಲೇ ಬಂದಿದ್ದರೆ ಬೆಂಗಳೂರಿನಲ್ಲಿ ಇಷ್ಟು ಕಷ

ವಾಗುತ್ತಾ ಇರಲಿಲ್ಲ. ಈಗ ಮಿತಿ ವಿಧಿಸಿರುವುದರಿಂದ ಅವರಿಗೆ ಅನುಕೂಲವಾಗುತ್ತದೆ ಎಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ಪೇಮಗಲ್).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಚಂದಾಯ ನಚಿವರು ತಂದಿರತಕ್ಕ ಈ ಕರ್ನಾಟಕ ಪ್ರೇಕೆಂಟ್ ಲ್ಯಾಂಡ್ಸ್ ಇನ್ ಅರ್ಬನ್ ಏರಿಯಾಸ್ (ಪ್ರಾಹಿಬಿಷನ್ ಆಫ್ ಆಲಿನೇಷನ್) ಅಮೆಂಡ್‌ಮೆಂಟ್ ಬಿಲ್ 1976ರ ಬಗ್ಗೆ ಸ್ವಾಗತಿಸಿ ಕೆಲವು ಸಲಹೆಗಳನ್ನು ಕೊಡಬೇಕೆಂದು ಇಚ್ಛಿಸುತ್ತೇನೆ. ಈಗ ಬೆಂಗಳೂರು ನಗರ, ಮಂಗಳೂರು, ಬೆಳಗಾಂ, ಮತ್ತು ಹುಬ್ಬಳ್ಳಿ ಧಾರವಾರಗೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದ ಕಾಯಿದೆ ಜಾರಿಯಲ್ಲಿದೆ. ಇನ್ನು ಕೆಲವು ನಗರಗಳಿಗೆ ಸಂಬಂಧಪಟ್ಟ ಹಾಗೆ ಕಾಯಿದೆ ಇಲ್ಲ. ಇವೊತ್ತು ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ 16 ಕಿಲೋಮೀಟರ್ ಮಾಡಿರಬಹುದು, ಅನೇಕ ಹಳ್ಳಿಗಳು ಕೂಡ ಅರ್ಬನ್ ಲ್ಯಾಂಡ್ ಸೀಲಿಂಗ್ ತಳಗಡೆ ಬಂದಿದೆ. ಅಲ್ಲಿ ಅಗ್ರಿಕಲ್ಚರಲ್ ಲ್ಯಾಂಡ್, ಅದಕ್ಕೆ ಸಂಬಂಧಪಟ್ಟದ್ದು ಇದೆ. ಇವೊತ್ತು ಅನೇಕರು ಸಹಕಾರ ಸಂಘಗಳಲ್ಲಿ, ಬೇರೆ ಕಡೆಗಳಲ್ಲಿ ವ್ಯವಸಾಯ ಅಭಿವೃದ್ಧಿಗೆ ಸಾಲ ಮಾಡಲೇ ಬೇಕಾಗಿದೆ. ನನಗೆ ತಿಳಿದಿರುವಂತೆ ಕೆಲವು ಕಡೆ ಸಹಕಾರ ಸಂಘಗಳಲ್ಲಿ ಸಾಲ ಮಂಜೂರಾಗತಕ್ಕದ್ದಕ್ಕೆ, ಪಂಪ್‌ಸೆಟ್ಟುಗಳನ್ನು ಹಾಕುವುದಕ್ಕೆ ಸಾಲ ಮಂಜೂರಾಗಿದ್ದರೆ ಬರೆದುಕೊಡಬೇಕಾಗಿರುತ್ತದೆ ಅಂತಹ ಪರಿಸ್ಥಿತಿ ಇರುವಾಗ ಅಲ್ಲಿ ಈ ಒಂದು ಕಾನೂನಿಂದ ಆದಚಣೆ, ಅವರು ಸಾಲ ಪಡೆಯುವ ರೀತಿಯಲ್ಲಿ, ವ್ಯವಸಾಯ ಅಭಿವೃದ್ಧಿ ಮಾಡುವ ಮಟ್ಟದಲ್ಲಿ ತೊಡಕಾಗಿ ರೈತರಿಗೆ ತೊಂದರೆಯಾಗುತ್ತಿದೆ. ಆದುದರಿಂದ ತಾವು ಒಂದೇ ಸಾರಿ ಡಿಕ್ಲೇರ್ ಮಾಡಿ ತೆಗೆದು ಕೊಳ್ಳಬೇಕು, ಇಲ್ಲ, ರೈತರಿಂದ ಆ ಜಮೀನು ನಿಮ್ಮ ವಶಕ್ಕೆ ಬರುವವರೆಗೆ ಅವರ ವ್ಯವಸಾಯದ ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ, ಅದಕ್ಕೆ ಸಾಲ ಸೌಲಭ್ಯ ಪಡೆದು ಕೊಳ್ಳುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು. ಈಗ ನೂರಾರು ಸಂದರ್ಭದಲ್ಲಿ ಈ ರೀತಿಯಾಗಿ ಆಗಿರತಕ್ಕದ್ದು ನನ್ನ ಗಮನಕ್ಕೆ ಬಂದಿದೆ, ಇದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರಿಸಿದ್ದಕ್ಕೆ ಸರ್ಕಾರ ಒಂದು ನೋಟಿಫಿಕೇಷನ್ ಹೊರಡಿಸುವುದು ಇದೆ, ಅಲ್ಲಿಯವರೆಗೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದರು. ಈಗ ಇರತಕ್ಕ ತೊಡಕನ್ನು ಸರಿಪಡಿಸಿದರೆ ಅನೇಕ ರೈತರಿಗೆ ಅನುಕೂಲವಾಗುತ್ತದೆ, ಆದನ್ನು ಬೇಗ ಮಾಡಬೇಕು ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮೊದಲು ಈ ಪರಭಾರೆಯನ್ನು ವಿರೋಧ ಮಾಡತಕ್ಕ ಈ ಕಾಯಿದೆ ಅವಶ್ಯಕವಾಗಿ ಇದ್ದುದರಿಂದ ತಂದಿದ್ದೂ. ಕೇಂದ್ರದಿಂದ ಬಂದಂತ ಕಾನೂನು ಇಲ್ಲ ಜಾರಿ ಆದಮೇಲೆ ಅವಶ್ಯಕತ ಇಲ್ಲ ಎಂದು ನಾವು ತೆಗೆದುಹಾಕುತ್ತಿದ್ದೇವೆ. ಈಗ ಇರತಕ್ಕ ಕಾಯಿದೆಯಲ್ಲಿ ಕೆಲವು ತೊಡಕುಗಳು ಇವೆ ಅವುಗಳನ್ನು ನಿವಾರಿಸ ಬೇಕೆಂದು ಮಾನ್ಯಸದಸ್ಯರು ಸಲಹೆ ಕೊಟ್ಟಿದ್ದಾರೆ, ಅದನ್ನು ನಾವು ರಿಪೀರ್ ಮಾಡತಕ್ಕ ಸಂದರ್ಭದಲ್ಲಿ ಅದು ಸೂಕ್ತವಾದಂತ, ಇದಕ್ಕೆ ಲಗತ್ತಾದಂತ ಸಲಹೆ ಅಲ್ಲದಿದರೂ ನಾನು ಒಂದೆರಡೂ ಮಾತುಗಳನ್ನು ಹೇಳಬೇಕಾಗಿದೆ. ಈಗ ಸರ್ಕಾರ ಯಾವ ಯಾವ ಭೂಮಿಗೆ ವಿನಾಯ್ತಿ ಕೊಡಬೇಕು ಎನ್ನುವ ಬಗ್ಗೆ ಮಾನ್ಯ ಶಾಮಣ್ಣನವರು ಹೇಳಿದರು, ಈಗ ಕೈಗಾರಿಕೆಗಳಿಗೆ ವಿನಾಯ್ತಿ ಇದರಲ್ಲಿ ಇಲ್ಲ, ಅದನ್ನು ಕೊಡುವ ಹಾಗೆ ಮಾಡಬೇಕು ಎಂದು ಹೇಳಿದರು ಕೈಗಾರಿಕೆ ಎಂದು ಸ್ಪಷ್ಟವಾಗಿ ಇಲ್ಲದಿದ್ದರೂ ಸರ್ಕಾರಕ್ಕೆ ಕೊಡುವುದಕ್ಕೆ ಅಧಿಕಾರ ಇರುವುದರಿಂದ ಸಂದರ್ಭ ನೋಡಿ ವಿನಾಯ್ತಿ ಕೊಡಲು ಸರ್ಕಾರಕ್ಕೆ ಅವಕಾಶ ಇದೆ. ಇನ್ನೊಂದು ವಿಷಯ ಜಮೀನನ್ನು ಅಣ್ಣತಮ್ಮಂದಿರು ವಿಭಾಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಬೇಕು ಎಂದು ಹೇಳಿದರು, ಈಗ ಬಂದಿರತಕ್ಕ ಕಾನೂನು ರೀತಿಯಲ್ಲಿ ವಿಭಾಗ ಮಾಡಿಕೊಳ್ಳುವಂತಾದ್ದನ್ನು ಕಾನೂನು ನಿಷೇಧ ಮಾಡಿಲ್ಲ ಅದಕ್ಕೆ ಅವಕಾಶ ಇದೆ ಎಂದು ನನ್ನ ಅಭಿಪ್ರಾಯ. ಇನ್ನು ಜಮೀನನ್ನು ಆಟದ ಮೈದಾನಗಳಿಗೆ, ಪಾರ್ಕ್‌ಗಳಿಗೆ, ಕಚೇರಿ ಕಟ್ಟಡಗಳಿಗೆ, ಶಾಲಾ ಕಟ್ಟಡಗಳಿಗೆ, ಕೊಡಲು ಸರ್ಕಾರಕ್ಕೆ ಸಾಕಷ್ಟು ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ, ಇದನ್ನೆಲ್ಲಾ ಗಮನದಲ್ಲಿಟ್ಟು ಕೊಂಡು ನಿಯಮಗಳು ಈಗಾಗಲೇ ರಚನೆಯಾಗಿದೆ. ಇನ್ನು ಏನಾದರೂ ತೊಡಕು ಇದ್ದರೆ ಮತ್ತೆ ಪರಿಶೀಲನೆ ಮಾಡುತ್ತೇನೆ ಎಂದು ನಾನು ಮಾನ್ಯಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವ್ಯವಸಾಯದ ಜಮೀನು ಇದರಲ್ಲಿ ಸೇರಿಕೊಂಡಿದೆ, ಇದರಿಂದ ರೈತರಿಗೆ ಸಾಲ ಪಡೆಯುವುದಕ್ಕೆ ಮತ್ತೆ ಅವರು ಜಮೀನನ್ನು ಅಭಿವೃದ್ಧಿ ಮಾಡುವುದಕ್ಕೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಇದಕ್ಕೆ ಏನಾದರೂ ತಿದ್ದುಪಡಿ ಅವಶ್ಯಕ ಆದರೆ ಕೇಂದ್ರಕ್ಕೆ ಬರೆದು ತಿದ್ದುಪಡಿ ಮಾಡಿಸತಕ್ಕ ಕ್ರಮ ಕೈಗೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಿ, ಇದಕ್ಕೆ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

2-30 P.M.

MADAM SPEAKER.—The question is :

"That the Karnataka Vacant Lands in Urban Areas (Prohibition of Alienation) (Amendment) Bill 1976 be taken into consideration."

The motion was adopted.

CLAUSE 2.

MADAM SPEAKER.—The question is :

"That clause 2 do stand part of the Bill."

The motion was adopted.

Clause 2 was added to the Bill.

CLAUSE 1 ETC.

MADAM SPEAKER.—The question is :

"That clause 1, the Long Title, the Preamble and the Enacting Formula do stand part of the Bill."

The motion was adopted.

Clause 1, the Long Title, the Preamble and the Enacting formula were added to the Bill.

MOTION TO PASS,

SRI N. HUTCHMASTHY GOWDA.—I beg to move :

"That the Karnataka Vacant Lands in Urban Areas (Prohibition of Alienation) (Amendment) Bill, 1976, be passed."

MADAM SPEAKER.—The question is :

"That the Karnataka Vacant Lands in Urban Areas (Prohibition of Alienation) (Amendment) Bill, 1976, be passed."

The motion was put and adopted and the Bill was passed.